**ಅತೀ ಜರೂರು ಆದ್ಯತೆಯ ಮೇರೆಗೆ**

ಸಂಖ್ಯೆ:ಕಾಶಿಇ/65/ಯುಜಿಸಿ/ಬಾಜಿ/ಆಯವ್ಯಯ/2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:23-11-2016.

## ಸುತ್ತೋಲೆ

ವಿಷಯ: ಯುಜಿಸಿ 6ನೇ ವೇತನ ಜಾರಿ ಮಾಡಿದ 2006ರ ಪರಿಷ್ಕೃತ ವೇತನ ಶ್ರೇಣಿಯ ಹಿಂಬಾಕಿಯನ್ನು ಪಾವತಿಸುವ ಸಂಬಂಧ ಮಾಹಿತಿಗಳನ್ನು ನೀಡುವ ಕುರಿತು.

ಉಲ್ಲೇಖ: 1) ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ:23-08-2016 ಮತ್ತು ದಿ:17-10-2016
2) ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ: 29-06-2016, ದಿ:02-07-2016 ಮತ್ತು ದಿ:14-09-2016.
3) ಆರ್ಥಿಕ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:ಎಪ್ ಡಿ:ಎ ಸಿ ಎಸ್: 27/2016 ದಿ: 7/11/2016

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಛೇರಿಯ ಸುತ್ತೋಲೆಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕ ಸಿಬ್ಬಂದಿಗಳ 2006ರ ಪರಿಷ್ಕೃತ ಯು.ಜಿ.ಸಿ ಬಾಕಿ ಪಾವತಿಸುವ ಸಂಬಂಧ ಅನುದಾನ ಬಿಡುಗಡೆ ಮಾಡಿ, ಯು.ಜಿ.ಸಿ ಬಾಕಿ ಪಾವತಿಸಲಾದ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ. ಆದರೆ ಇದುವರೆವಿಗೂ ಸಿಬ್ಬಂದಿವಾರು ಯು.ಜಿ.ಸಿ ಬಾಕಿ ಪಾವತಿಸಿರುವ ಬಗ್ಗೆ ಬಳಕೆ ಪ್ರಮಾಣ ಪತ್ರಗಳು ಸ್ವೀಕೃತವಾಗಿರುವುದಿಲ್ಲ. ಸದರಿ ಅರ್ಹ ಬೋಧಕ ಸಿಬ್ಬಂದಿಗಳಿಗೆ ಪಾವತಿ ಮಾಡದಿದ್ದಲ್ಲಿ ಕೂಡಲೇ ಉಲ್ಲೇಖ(1) ರನ್ವಯ ಯು.ಜಿ.ಸಿ ಹಿಂಬಾಕಿ ಪಾವತಿಸಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲು ಸೂಚಿಸಿದೆ.

2016-17ನೇ ಸಾಲಿನಲ್ಲಿ ಖಾಸಗಿ ಅನುದಾನಿತ ಪದವಿ ಹಾಗೂ ಬಿ.ಎಡ್ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ 2006ರ ಪರಿಷ್ಕೃತ ಯು.ಜಿ.ಸಿ. ಹಿಂಬಾಕಿಯನ್ನು ಪಾವತಿಸಲು ಉಲ್ಲೇಖ(2) ರಲ್ಲಿ ಜಂಟಿ ನಿರ್ದೇಶಕರ ಕಛೇರಿಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಈ ಸಂಬಂಧ ಸದರಿ ಅನುದಾನವನ್ನು ಸಂಬಂಧಿಸಿದವರಿಗೆ ಪಾವತಿಸಿರುವ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. ಇದುವರೆವಿಗೂ ಸಂಬಂಧಿಸಿದವರಿಗೆ ಪಾವತಿಸದಿದ್ದಲ್ಲಿ ಉಲ್ಲೇಖ(2) ರನ್ವಯ ಕೂಡಲೆ ಪಾವತಿಸಿ ಸಿಬ್ಬಂದಿವಾರು ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲು ಸೂಚಿಸಿದೆ.

ಉಲ್ಲೇಖ(3)ರ ಪತ್ರದಲ್ಲಿ ದಿ:15/11/2016ರ ನಂತರ ಈ ಇಲಾಖೆಯಿಂದ ಬಿಡುಗಡೆ ಮಾಡುವ ಎಲ್ಲಾ ಅನುದಾನವನ್ನು ಖಜಾನೆ-2 ರಲ್ಲಿ ಬಿಡುಗಡೆ ಮಾಡಲು ತಿಳಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ(1) ಮತ್ತು (2) ರಲ್ಲಿ ನೀಡಿರುವ ಅನುದಾನವನ್ನು ಕೂಡಲೆ ಬಳಸಿಕೊಂಡು ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲು ತಿಳಿಸಿದೆ. ಸದರಿ ಅನುದಾನವನ್ನು ಸಕಾಲದಲ್ಲಿ ಬಳಸಿಕೊಳ್ಳದೆ ವ್ಯಪಗತವಾದಲ್ಲಿ ತಮ್ಮನ್ನೆ ಜವಾಬ್ದಾರರನ್ನಾಗಿ ಮಾಡಲಾಗುವುದು.

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

1) ಯೋಜನೆ/ಯೋಜನೇತರಡಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – **ತುರ್ತು ಕ್ರಮಕ್ಕಾಗಿ.**
2) ಕೇಂದ್ರ ಕಛೇರಿ ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮಂಗಳೂರು, ಮೈಸೂರು, ಧಾರವಾಡ, ಶಿವಮೊಗ್ಗ ಮತ್ತು ಕಲ್ಬುರ್ಗಿ – **ತುರ್ತು ಕ್ರಮಕ್ಕಾಗಿ.**
3) ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇವರಿಗೆ ಸದರಿ ಸುತ್ತೋಲೆಯನ್ನು ಇಲಾಖಾ ಅಂತರ್ ಜಾಲದಲ್ಲಿ ಅಳವಡಿಸಲು.
4) ಕಛೇರಿ ಪ್ರತಿ.

BUD_65_UGC_16-17.docx